# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಲೋಕೋಪಯೋಗಿ ಇಲಾಖಾ ರಸ್ತೆಗಳಲ್ಲಿನ ಅಪಘಾತದ ಕಪ್ಪು ಸ್ಥಳಗಳನ್ನು ವಿಶ್ವ ಬ್ಯಾಂಕ್ ಯೋಜನೆಯ ಕಾರ್ಯಕ್ರಮದಲ್ಲಿ ಅಭಿವೃದ್ಧಿಪಡಿಸುವ ಕುರಿತು.

**ಓದಲಾಗಿದೆ:**

1) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು ಇವರ ಪತ್ರ ಸಂಖ್ಯೆ:ಮುಇಂ:ಸಂಕದ: ರಶಾ: ಐ.ಡಿ.ಎಸ್: ಸಇಂ5:48:03–04, ದಿನಾಂಕ:30–09–2003.
2) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು ಇವರ ಪತ್ರ ಸಂಖ್ಯೆ: ಮುಇಂ:ಸಂಕದ: ರಶಾ: ಅಪಘಾತ: ಕಪ್ಪು ಸ್ಥಳ: ಮಂಡ್ಯ: ಸಇಂ5: 48: 2003–04, ದಿನಾಂಕ:16–12–2003.

**ಪ್ರಸ್ತಾವನೆ:**

ಮೇಲೆ ಓದಲಾದ (1) ಮತ್ತು (2) ರ ಪತ್ರಗಳಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು ಇವರು ತುಮಕೂರು ಜಿಲ್ಲೆಯಲ್ಲಿ ಕೊಳ್ಳೆಗಾಲ–ಕೊರಟಗೆರೆ ರಾಜ್ಯ ಹೆದ್ದಾರಿ ಸಂಖ್ಯೆ:33 ರಲ್ಲಿ ಅಪಘಾತಗಳ ಕಪ್ಪು ಸ್ಥಳಗಳನ್ನು ಒಟ್ಟು ರೂ.18.88 ಲಕ್ಷಗಳ ಅಂದಾಜಿನಲ್ಲಿ ಅಭಿವೃದ್ಧಿ ಪಡಿಸಲು ಮತ್ತು ಮಂಡ್ಯ ಜಿಲ್ಲೆಯ ರಾಜ್ಯ ಹೆದ್ದಾರಿ–7 ರಲ್ಲಿ 3 ಅಪಘಾತ ಕಪ್ಪು ಸ್ಥಳಗಳನ್ನು ರೂ.5.30 ಲಕ್ಷಗಳಲ್ಲಿ ಅಭಿವೃದ್ಧಿಪಡಿಸಲು ಅಂದರೆ ಒಟ್ಟು ಈ ಕೆಳಕಂಡ 7 ಅಪಘಾತ ಕಪ್ಪು ಸ್ಥಳಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಕೋರಿರುತ್ತಾರೆ.

ತುಮಕೂರು ಜಿಲ್ಲೆಯ ಕೊಳ್ಳೇಗಾಲ–ಕೊರಟಗೆರೆ ರಾಜ್ಯ ಹೆದ್ದಾರಿ ನಂ:33ರಲ್ಲಿ ಗುರುತಿಸಲಾದಂತಹ 4 ಅಪಘಾತದ ಕಪ್ಪು ಸ್ಥಳಗಳ ವಿವರ.

| ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಹೆದ್ದಾರಿಯ ಸರಪಳಿ 138.00 ರಿಂದ 139.0 ಕಿಮೀ ವ್ಯಾಪ್ತಿಯಲ್ಲಿರುವ ಗೂಳೂರು ಗ್ರಾಮ ಪರಿಮಿತಿಯಲ್ಲಿರುವ ಸ್ಥಳದ ಅಭಿವೃದ್ಧಿ (ದರ್ಜೆ ಸಂಖ್ಯೆ:16) | 5.35 |
| 2 | ಹೆದ್ದಾರಿಯ ಸರಪಳಿ 119.00 ರಿಂದ 120.00 ಕಿಮೀ ವ್ಯಾಪ್ತಿಯಲ್ಲಿರುವ ಹೆಬ್ಬೂರು ಗ್ರಾಮ ಪರಿಮಿತಿಯಲ್ಲಿರುವ ಸ್ಥಳದ ಅಭಿವೃದ್ಧಿ (ದರ್ಜೆ ಸಂಖ್ಯೆ:20) | 6.59 |
| 3 | ಹೆದ್ದಾರಿಯ ಸರಪಳಿ 150.00 ರಿಂದ 151.00 ಕಿಮೀ ವ್ಯಾಪ್ತಿಯಲ್ಲಿರುವ ಅರಕೆರೆ ಗ್ರಾಮ ಪರಿಮಿತಿಯಲ್ಲಿನ ಸ್ಥಳದ ಅಭಿವೃದ್ಧಿ (ದರ್ಜೆ ಸಂಖ್ಯೆ:27) | 4.45 |
| 4 | ಹೆದ್ದಾರಿಯ ಸರಪಳಿ 142.00 ರಿಂದ 143.00 ಕಿಮೀ ವ್ಯಾಪ್ತಿಯಲ್ಲಿರುವ ಮರಳೂರು ಕೆರೆ ಗ್ರಾಮ ಪರಿಮಿತಿಯಲ್ಲಿನ ಸ್ಥಳದ ಅಭಿವೃದ್ಧಿ (ದರ್ಜೆ ಸಂಖ್ಯೆ:28) | 2.49 |
| | ಒಟ್ಟು | 18.88 |

ಮಂಡ್ಯ ಜಿಲ್ಲೆಯ ರಾಜ್ಯ ಹೆದ್ದಾರಿ–7ರಲ್ಲಿ ಗುರುತಿಸಲಾದಂತಹ 3 ಅಪಘಾತದ ಕಪ್ಪು ಸ್ಥಳಗಳ ವಿವರ.

| ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಪಾಂಡವಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ಪಾಂಡವಪುರ ರೈಲ್ವೆ ಸ್ಟೇಷನ್ ಅರಸೀಕೆರೆ ರಾಜ್ಯ ಹೆದ್ದಾರಿ:7ರ ಸರಪಳಿ 19.06 ಕಿಮೀ ಚಿನಕುರಳಿಯ ಕಪ್ಪು ಸ್ಥಳದ ಅಭಿವೃದ್ಧಿ. (ಕ್ರಮ ಸಂಖ್ಯೆ:3) | 2.50 |
| 2 | ಪಾಂಡವಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ಪಾಂಡವಪುರ ರೈಲ್ವೆ ಸ್ಟೇಷನ್ ಅರಸೀಕೆರೆ ರಾಜ್ಯ ಹೆದ್ದಾರಿ:7ರ ಸರಪಳಿ 5.76 ಕಿಮೀ ನಲ್ಲಿನ ಆರತಿ ಉಕ್ಕಡ ಗೇಟ್ ಬಳಿಯ ಕಪ್ಪು ಸ್ಥಳದ ಅಭಿವೃದ್ಧಿ. (ಕ್ರಮ ಸಂಖ್ಯೆ:7) | 2.20 |
| 3 | ಕೆ.ಆರ್.ಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ಪಾಂಡವಪುರ ರೈಲ್ವೆ ಸ್ಟೇಷನ್ ಅರಸೀಕೆರೆ ರಾಜ್ಯ ಹೆದ್ದಾರಿ:7ರ ಸರಪಳಿ 33.00 ಕಿಮೀ ನಲ್ಲಿನ ಮುರುಕುನಹಳ್ಳಿ ಸೇತುವೆ ಬಳಿಯ ಕಪ್ಪು ಸ್ಥಳದ ಅಭಿವೃದ್ಧಿ. (ಕ್ರಮ ಸಂಖ್ಯೆ:4) | 0.60 |
| | ಒಟ್ಟು | 5.30 |

<u>ಸರ್ಕಾರಿ ಆದೇಶ ಸಂಖ್ಯೆ: ಲೋಇ 12 ಸಿಆರ್‌ಎಂ 2004, ಬೆಂಗಳೂರು, ದಿನಾಂಕ:21-01-2004.</u>

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಇವರ ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ತುಮಕೂರು ಜಿಲ್ಲೆಯ ಕೊಳ್ಳೇಗಾಲ–ಕೊರಟಗೆರೆ ರಾಜ್ಯ ಹೆದ್ದಾರಿ ನಂ:33ರಲ್ಲಿ 4 ಕಪ್ಪು ಸ್ಥಳಗಳನ್ನು ರೂ.18.88 ಲಕ್ಷ ಮೊತ್ತದಲ್ಲಿ ಹಾಗೂ ಮಂಡ್ಯ ಜಿಲ್ಲೆಯ ರಾಜ್ಯ ಹೆದ್ದಾರಿ–7 ರಲ್ಲಿ 3 ಕಪ್ಪು ಸ್ಥಳಗಳನ್ನು ಒಟ್ಟು 5.30 ಲಕ್ಷಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

ಈ ಕಾಮಗಾರಿಗಳ ವೆಚ್ಚವನ್ನು "ಲೆಕ್ಕ ಶೀರ್ಷಿಕೆ 5054-03-337-0-81- State Highways Improvement Project (WBA) " ಇದರಡಿ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೇಖ್ ಅಬ್ದುಲ್ ವಾಜಿದ್)
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ ಇಲಾಖೆ (ಸಂಪರ್ಕ).

<u>ಇವರಿಗೆ:</u>

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಕೆ.ಆರ್.ವೃತ್ತ, ಬೆಂಗಳೂರು.
3) ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ವೃತ್ತ, ಬೆಂಗಳೂರು.
4) ಉಪಕಾರ್ಯದರ್ಶಿ, (ಐ.ಡಿ.ಎಸ್) ಲೋಕೋಪಯೋಗಿ ಇಲಾಖೆ, ಬೆಂಗಳೂರು.
5) ಮುಖ್ಯ ಮಾಹಿತಿ ಅಧಿಕಾರಿ, ಲೋಕೋಪಯೋಗಿ ಇಲಾಖೆ, ಬೆಂಗಳೂರು.
6) ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಬೆಂಗಳೂರು.
7) ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಬೆಂಗಳೂರು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.